ಪಿ.ಡಬ್ಲ್ಯೂ.1

ಪ್ರಮಾಣ ವಚನ ಭೋದಿಸಿದ ದಿನಾಂಕಃ28-11-2019
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

ಪಾಟೀ ಸವಾಲು ಶ್ರೀ ಡಿ ಜಿ ವಕೀಲರಿಂದ, ಪ್ರತಿವಾದಿ 1 , 6 ಮತ್ತು 7 ರ ಕಪರವಾಗಿಃ-

ನಾನು ಎಸ್ ಎಸ್ ಎಲ್ ಸಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ಓಬದೇವನಹಳ್ಳಿ ಗ್ರಾಮದಲ್ಲಿ 4ನೇ ತರಗತಿಯವರೆಗೆ ಮತ್ತು ರಾಜಾನುಕುಂಟೆ ವ್ಯಾಪ್ತಿಯಲ್ಲಿರುವ ಕಾಕೋಳು ಗ್ರಾಮದ ಶಾಲೆಯಲ್ಲಿ 5ನೇ ತರಗತಿ ಇಂದ 10ನೇ ತರಗತಿಯವರೆಗೆ ಓದಿದ್ದೇನೆ. ಆ ಸಮಯದಲ್ಲಿ ನಾನು ಓಬದೇವನಹಳ್ಳಿ ಇಂದ ಕಾಕೋಳು ಗ್ರಾಮಕ್ಕೆ ದಿನಂಪ್ರತಿ ಓಡಾಡುತ್ತಿದ್ದೆ. ಆ ಸಮಯದಲ್ಲಿ ದೊಡ್ಡಬಳ್ಳಾಪುರ ಪಟ್ಟಣದಲ್ಲಿ ಎಸ್ ಎಸ್ ಎಲ್ ಸಿ ವರೆಗೆ ಶಾಲೆಗಳು ಇದ್ದವು ಎಂದರೆ ಸರಿ ಇದೆ. ದೊಡ್ಡಬಳ್ಳಾಪುರದಲ್ಲಿ ವಿದ್ಯಾಭ್ಯಾಸ ಮಾಡಲು ತೊಂದರೆ ಇರಲಿಲ್ಲ ಆದರೆ ನಾನು ಅಜ್ಜಿ ಮನೆಯಲ್ಲಿ ವಾಸವಾಗಿದ್ದರಿಂದ ಕಾಕೋಳು ಗ್ರಾಮದಲ್ಲಿ ವಿದ್ಯಾಭ್ಯಾಸ ಮುಂದುವರೆಸಿದೆ. ನನ್ನ ಜನ್ಮ ದಿಃ16.07.1983 ಇರುತ್ತದೆ. ಈ ದಾವೆಯನ್ನು ನಾನು ನಮ್ಮ ತಂದೆಯವರ ಭಾಗಕ್ಕೆ ಬರುವ ಆಸ್ತಿಯನ್ನು ಪಡೆಯಲು ಹಾಕಿದ್ದೇನೆ. ದಾವೆಯನ್ನು ಬರೆಯಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಒಟ್ಟು 25 ಎಕರೆ ಜಮೀನಿನ ಸಂಬಂಧವಾಗಿ ಈ ದಾವೆಯನ್ನು ಸಲ್ಲಿಸಿದ್ದೇನೆ.

ದಾವೆ ಸಲ್ಲಿಸುವ ದಿನಾಂಕದಂದು ದಾವಾ ಆಸ್ತಿಗಳು ನಮ್ಮ ತಾತನ ಹೆಸರಿನಲ್ಲಿದ್ದವು. ದಾವೆ ಸಲ್ಲಿಸುವ ದಿನಾಂಕದಂದು ದಾವಾ ಆಸ್ತಿಗಳು ಹಂಸವೇಣಿ , ಮನು , ನಾರಾಯಣಪ್ಪ, ಹನುಮಂತಪ್ಪ , ಮುನಿತಾಯಮ್ಮ ರವರ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ. ಸಾಕ್ಷಿ ಸ್ವಂತ ವಾಗಿ ಹೇಳುತ್ತಾರೇ ಸುಬ್ಬಣ್ಣ ಬದುಕಿರುವವರೆಗೆ ಅವರ ಹೆಸರಿನಲ್ಲಿ ಆಸ್ತಿಗಳು ಇದ್ದು ಅವರು ತೀರಿಹೋದ ನಂತರ ಈ ಮೇಲೆ ಹೇಳಿದ ವ್ಯಕ್ತಿಗಳ ಹೆಸರಿನಲ್ಲಿ ಖಾತೆಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ಈ ದಾವೆಯನ್ನು ಸಲ್ಲಿಸುವ ದಿನಾಂಕದಂದು ನಮ್ಮ ತಾತ

ಪಿ.ಡಬ್ಲ್ಯೂ.1

ಸುಬ್ಬಣ್ಣ ಬದುಕಿರಲಿಲ್ಲ. ದಾವೆ ಹಾಕುವ ದಿನಾಂಕದಂದು ಆಗಲೇ ದಾವಾ ಆಸ್ತಿಯು ಖಾತೆ ಬದಲಾವಣೆ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಅವುಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆ.

ಮೂಲತಃ ದಾವಾ ಆಸ್ತಿಗಳು ನಮ್ಮ ತಾತ ಸುಬ್ಬಣ್ಣನ ಹೆಸರಿನಲ್ಲಿದ್ದವು. ನಮ್ಮ ತಾತನಿಗೆ ಸದರಿ ಆಸ್ತಿಗಳು ಅವರ ತಂದೆ ಇಂದ ಬಂದ ಆಸ್ತಿಗಳಿರುತ್ತವೆ. ಸುಬ್ಬಣ್ಣನವರ ತಂದೆಯು ಹೆಸರು ಕೆಂಪಣ್ಣ. ಸದರಿ ಕೆಂಪಣ್ಣರವರಿಗೆ ಇಬ್ಬರು ಗಂಡು ಮಕ್ಕಳು ಇದ್ದರು. ಒಬ್ಬರು ನಮ್ಮ ತಾತ ಹಾಗೂ ಇನ್ನೊಬ್ಬರು ನಾರಾಯಣಪ್ಪ. ಕೆಂಪಣ್ಣ ತೀರಿಹೋದ ನಂತರ ಅವರ ಮಕ್ಕಳಿಗೆ ಆಸ್ತಿಗಳು ಪಾಲುವಿಭಾಗದ ಮುಖಾಂತರ ಬಂದವು. ಅವರು ಯಾವ ದಿನಾಂಕದಂದು ಭಾಗ ಮಾಡಿಕೊಂಡರು ಎಂಬುದು ಗೊತ್ತಿಲ್ಲ. ನಾರಾಯಣಪ್ಪ ಹಾಗೂ ಸುಬ್ಬಣ್ಣರವರ ಮದ್ಯೆ ಆಗಿದೆ ಎನ್ನಲಾದ ವಿಭಾಗ ಪತ್ರವನ್ನು ನಾನು ನೋಡಿಲ್ಲ. ಸುಬ್ಬಣ್ಣರವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಮತ್ತು ದಾಖಲಾತಿ ಪತ್ರಗಳು ಇರುವುದರಿಂದ ಅವರ ಹೆಸರಿನಲ್ಲಿ ಖಾತೆ ಇತ್ತು ಎಂದು ಹೇಳುತ್ತೇನೆ. ಸುಬ್ಬಣ್ಣರವರ ಭಾಗಕ್ಕೆ ಯಾವ ಯಾವ ಆಸ್ತಿಗಳು ಬಂದಿದ್ದವು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ ಇದೆ. ನಾರಾಯಣಪ್ಪನ ಭಾಗಕ್ಕೆ ಬಂದ ಆಸ್ತಿಗಳು ಕೂಡ ಈ ದಾವೆಯಲ್ಲಿ ಸೇರಿಸಿದ್ದೇವೆಂದರೆ ಸರಿಯಲ್ಲ. ಕೃಷಿ ಜಮೀನುಗಳನ್ನು ಬಿಟ್ಟು ಮನೆ ಆಸ್ತಿಗಳು ಕೂಡ ಸುಬ್ಬಣ್ಣನ ಭಾಗಕ್ಕೆ ಬಂದಿತ್ತು. ಸದರಿ ಮನೆ ಆಸ್ತಿಗಳನ್ನು ಕೂಡ ಈದಾವೆಯಲ್ಲಿ ಸೇರಿಸಿದ್ದೇವೆ. ಸದರಿ ಮನೆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಎಂ.ಬಿ ಕುಲಕರ್ಣಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.

ಪಿ.ಡಬ್ಲ್ಯೂ.1